ಶ್ರೀ ಬಿ. ಡಿ. ಜತ್ತಿ.—ಸಾಧ್ಯವಾಗುವುದಿಲ್ಲ. ಪ್ಯುಮಿಗೇಷನ್ ಮಾಡಬೇಕಾಗುತ್ತದೆ ಮತ್ತು ಎರ್ಲಾ ಕೋ ಆಪರೇಟೀವ್ ಸೊಸೈಟಿ ಗೋದಾನಗಳಲ್ಲೂ ಇಡುವುದಕ್ಕಾಗುವುದಿಲ್ಲ. ಖಾನಗಿ ಮಿಲ್ಲುಗಳಿಗೆ ಕೊಡಬೇಕಾಗುತ್ತದೆ. ಕೋ ಆಪರೇಟೀವ್ ಸೊಸೈಟಿ ಗೋದಾನ್ ಸಾಕಷ್ಟು ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಾವು ಕ್ವಿಂಟಾಲಿಗೆ 19-20 ರೂಪಾಯಿ ಖರ್ಚು ಮಾಡು ತ್ತೀರಿ, ಒಬ್ಬ ರೈತ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ ಎಂದು ಲೆಕ್ಕ ಹಾಕಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಕಾನ್ಸ್ಟ್ ಆಫ್ ಪ್ರೊಡಕ್ಷನ್ ಲೆಕ್ಕ ಹಾಕಿ ಪ್ರೈಸ್‌ಫಿಕ್ಸ್ ಮಾಡುತ್ತಾರೆ.

ಶ್ರೀ ಕೆ. ಪಿ. ಗದಗ್.—ರೈತರು ರೆವಿ ಕೊಟ್ಟ ಮೇರೆ ಉಳಿದ ಸ್ಟಾಕನ್ನು ಮಾರ್ಕೆಟ್ಟಿನಲ್ಲಿ ಮಾರುವುದರಿಂದ ಆವನಿಗೆ ಹೆಚ್ಚಿನ ರಾಭ ಸಿಗಬಹುದೆಂಬ ಉದ್ದೇಶದಿಂದ ಈ ತಾಲಿಸಿಯನ್ನು ಮಾಡಿರುವುದೇ ?

ಶ್ರೀ ಬಿ. ಡಿ. ಜತ್ತಿ.—ಈ ಉದ್ದೇಶವಲ್ಲದಿದ್ದರೂ, ಓಪನ್ ಮಾರ್ಕೆಟ್ಟಿನಲ್ಲಿ ಮಾರುವುದಕ್ಕೆ ಬೇಕಾದಷ್ಟು ಸ್ಟಾಕ್ ಉಳಿಯುತ್ತದೆ. ಇದರಿಂದ ಅವನಿಗೆ ಅನುಕೂಲವಾಗುತ್ತದೆ.

Production of Hybrid Seeds.

*ಪ್ರ.—323. Sri C. M. REVANASIDDAIAH (Siruguppa).—

Will the Government be pleased to state :—

(*a*) the quantity of hybrid jowar and maize seed produced for seed purpose in the Government farms in the State so far ;

(*b*) if not produced, the reasons for the same ;

(*c*) whether any programme has been chalked out to produce hybrid seeds in Government farms ;

(*d*) the approximate quantity of seed production that could be got from Government farms for next sowing season ;

(*e*) whether they have given any aid to private producers of hybrid seeds in the State ?

*A.—Sri S. NIJALINGAPPA (Chief Minister) [on behalf of Sri G. Narayana Gowda (Minister for Agriculture)].—

(*a*)

Hybrid jowar.	Hybrid maize.
Nil	284·52 Qtls.

(*b*) The hybrid varieties are released for cultivation very recently.

(*c*) Not yet.

(*d*) Very much limited.

(*e*) Yes.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸ್ವಾಮಿ, ಈಗ ಉತ್ತರ ರೂಪವಾಗಿ ಹೈಬ್ರಿಡ್ ಬೀಜ ಬೆಳಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇದರ ಅವಶ್ಯಕತೆ ಈಗ ಜಾಸ್ತಿ ಇದ್ದುದರಿಂದ ಹೆಚ್ಚಿಗೆ ಬೆಳೆಯಲು ಏಕೆ ಸರ್ಕಾರ ಪ್ರಯತ್ನ ಮಾಡಲಿಲ್ಲ ?

ಶ್ರೀ ಎನ್. ನಿಜಲಿಂಗಪ್ಪ.—ಪ್ರಯತ್ನ ಸಾಕಷ್ಟು ನಡೆಸಿ ಈಗ ಒಂದು ಲಕ್ಷ ಎಕರೆಗಳಲ್ಲಿ ಮಾಡುತ್ತಿದ್ದೇವೆ. ಬೇರೆ ಕಡೆ ಕೂಡ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಅಕ್ಕಪಕ್ಕದ ರಾಜ್ಯಗಳಲ್ಲಿ ಬೀಜಗಳನ್ನು ಬೇಕಾದಷ್ಟು ಉತ್ಪತ್ತಿ ಮಾಡಿ ಈಗಾಗಲೇ ಸಾಕಷ್ಟು ಕೊಡುತ್ತಿದ್ದಾರೆ. ಆದರೆ ನಮ್ಮಲ್ಲಿ ಏಕೆ ಹೆಚ್ಚಿಗೆ ಮಾಡಲಿಲ್ಲ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಬೀಜಗಳನ್ನು ಬೆಳನಬೇಕಾದರೆ ಸಾಕಷ್ಟು ನೀರು ಬೇಕು. ನಮ್ಮಲ್ಲಿ ಈಗ ನೀರಿನ ಅನುಕೂಲ ಹೆಚ್ಚಿಗೆ ಆದುದರಿಂದ 8-10 ತಿಂಗಳಿನಿಂದ ಪ್ರಾರಂಭ ಮಾಡಿದ್ದೇವೆ. ಕೆಲವು ಜನ ಖಾಸಗಿ ರೈತರು ಉತ್ಪಾದನೆ ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ನಮ್ಮ ರಾಜ್ಯದಲ್ಲಿರತಕ್ಕಂತಹ ಹೈಬ್ರಿಡ್ ಜವಾರನ್ನು ಬೆಳೆಯಬೇಕೆಂದು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಹೆಚ್ಚಿಗೆ ಫಾರ್ಮುಗಳಲ್ಲಿ ಬೆಳೆಯುವುದಕ್ಕೆ ಖಾಸಗಿ ಜನಗಳಿಗೆ ಕೊಡಬೇಕೆನ್ನುವ ಉದ್ದೇಶ. ಉಳಿದ ಪ್ರದೇಶಗಳಲ್ಲಿ ಕೊಡಬೇಕೆನ್ನುವ ಉದ್ದೇಶವಿದೆ; ಅದಲ್ಲದೆ ಗಂಗಾವತಿ, ಶಿವಮೊಗ್ಗ, ಜಮಖಂಡಿಗಳಲ್ಲಿ ಈಗ ಮಾಡುತ್ತಿದ್ದೇವೆ. ಮುಂದಿನ ಸಲ ಬೇರೆ ಪ್ರದೇಶಗಳಾದ ಚಿತ್ರದುರ್ಗ, ಧಾರವಾಡ, ಬೆಳ್ಳಾಂ, ಬಳ್ಳಾರಿ, ರಾಯಚೂರು ಇತ್ಯಾದಿ ಜಿಲ್ಲೆಗಳಲ್ಲಿ ಪ್ರಯತ್ನ ನಡೆಸಬೇಕೆಂದು ಇದೆ.

Sri K. LAKKAPPA.—What are the steps taken to help the private producers to increase the production of hybrid maize in the State ?

ಶ್ರೀ ಎಸ್. ನಿಜಲಿಂಗಪ್ಪ.—ಬೀಜ ತರಿಸಿ ಕೊಡುತ್ತೇವೆ. ಮತ್ತು ಅದಕ್ಕೆ ಬೇಕಾದ ಸಾಕಾರ್ಯಗಳನ್ನು ಕೊಡುತ್ತಿದ್ದೇವೆ. ಮತ್ತು ಮುಂಗಡ ಹಣ ಗೊಬ್ಬರ, ವಗ್ಗೈರೆ ಕೊಟ್ಟು ಅದನ್ನು ಸಾಕಷ್ಟು ಉತ್ಪಾಹದಿಂದ ಬೆಳೆಯುವಂತೆ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಜೀಜದ ಉತ್ಪತ್ತಿಯು ಇನ್ನೂ ಎಕ್ಸ್‌ಪರಿಮೆಂಟ್ ಸ್ಟೇಜಿನಲ್ಲಿ ಇದೆ. ಕೊಯೆಂಬತ್ತೂರಿನಿಂದ ತರಿಸಿದರೆ ಅದರ ಬೆಲೆ 10-12 ರೂಪಾಯಿಯಾಗುತ್ತದೆ. ಇದರಿಂದ ಒಂದೆರಡು ಷಿವ್ ರೋಡ್ ಇಂಪೋರ್ಟ್ ಮಾಡಿ ನಮ್ಮ ರೈತರಿಗೆ ಅನುಕೂಲ ಮಾಡಿದರೆ ಒಳ್ಳೆಯದಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಗ ಇದಕ್ಕೆ ಹೊರಗಿನ ದೇಶದಿಂದ ತರಿಸುವ ಅವಶ್ಯಕತೆ ಇಲ್ಲ. ನಮಗೆ ಬೇಕಾದಷ್ಟು ನಾವು ತಯಾರು ಮಾಡುತ್ತೇವೆ. ಈಗಲೇ ಬೇಕಾದಷ್ಟು ಉತ್ಪತ್ತಿ ಮಾಡಿ ಮುಂದಿನ ಸೀಸನ್‌ನಲ್ಲಿ ಸಾಕಷ್ಟು ನಮಗೆ ಸಿಗುತ್ತದೆ. ಅದರಲ್ಲಿ ಏನೂ ಅನುಮಾನವಿಲ್ಲ.

ಶ್ರೀ ಟಿ. ಕೆ. ಕಂಬ್ಳಿ.—ಈಗ ಈ ಹೈಬ್ರಿಡ್ ಬೀಜ ಮಾಡಬೇಕಾದರೆ, ಗಂಡು ಬೀಜ ಮತ್ತು ಹೆಣ್ಣು ಬೀಜ ಬೇಕಾಗುತ್ತದೆ. ಇದು ನಮ್ಮ ರಾಜ್ಯದಲ್ಲಿ ಸಾಕಷ್ಟು ಸಿಗುತ್ತದೆಯೇ, ಸಿಗದಿದ್ದರೆ ಎಲ್ಲಿಂದ ತರಿಸುತ್ತೀರಿ.

ಶ್ರೀ ಎಸ್. ನಿಜಲಿಂಗಪ್ಪ.—ಅದೆಲ್ಲವನ್ನೂ ಹೊರಗಡೆಯಿಂದ ತರಿಸಿ ಇಲ್ಲಿ ಪೇರೆಂಟ್ ಸೀಡ್ಸ್ ಮಾಡಿ ಎಲ್ಲರಿಗೂ ಹಂಚುತ್ತೇವೆ.

ಶ್ರೀ ಕೆ. ಎ. ಬೈರೇಗೌಡ.—ನ್ಯಾಶನರ್ ಸೀಡ್ ಕಾರ್ಪೊರೇಷನ್ ನಂಸ್ಥೆಯವರು ಫಲದಾಯಕವಾಗಿ ಮಾಡಿದ್ದಾರೆ. ಬೆಂಗಳೂರು ಡಿಲ್ಲಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡದ್ದು ಎಷ್ಟು ಮಟ್ಟಿಗೆ ಸಫಲವಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ನ್ಯಾಶನರ್ ಸೀಡ್ ಕಾರ್ಪೊರೇಶನ್ನಿನವರು ಸಾಕಷ್ಟು ಸಹಾಯ ಮಾಡಿದ್ದಾರೆ. ಇಲ್ಲಿ ನಾವು ಕೆಲವು ಖಾಸಗಿ ಕ್ಷೇತ್ರಗಳಲ್ಲಿ ಮತ್ತು ಸರ್ಕಾರಿ ಕ್ಷೇತ್ರಗಳಲ್ಲಿ ಬೀಜ ಉತ್ಪತ್ತಿ ಮಾಡುತ್ತಿದ್ದೇವೆ.

Sri C. J. MUCKANNAPPA.—May I know the difficulty that the Government farms are facing to produce more hybrid maize and jowar, Sir ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಇದು ಬಂದು ಒಂದು ಒಂದುವರೆ ವರ್ಷವಾಯ್ತು. ಅದ್ದರಿಂದ ಎರಡ್ನಾ ಕಡೆ ಮಾಡುವುದಕ್ಕೆ ಕಷ್ಟ ಇದೆ. ಎಲ್ಲೆಲ್ಲ ಸಾಧ್ಯವೋ ಅಲ್ಲ ಮಾಡುತ್ತೇವೆ. ಖಾಸಗೀ ಜನರು ಮುಂದೆ ಬಂದರೆ ಅವರಿಗೆ ಅನುಕೂಲಗಳನ್ನು ಒದಗಿಸುತ್ತೇವೆ.

ಶ್ರೀಮತಿ ಸುಶೀರಾಬಾಯಿ ಹಿರಾಚಂದ್ ಪಾ.—ಈಗ 10-15 ಎಕರೆ ಏನಾದರೂ ಮಿನಿಮಮ್ ಇರುವವರಿಗೆ ಸೀಡ್ಸ್ ಕೊಡಬೇಕು, ಉಳಿದ ಸಣ್ಣ ರೈತರಿಗೆ ಬೀಜ ಕೊಡಬಾರದು ಎಂದು ಏನಾದರೂ ಇದೇಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ಗೊತ್ತಿಲ್ಲ. ಈಗ ಮೊನ್ನೆ ತುಂಗಭದ್ರಾ ಏರಿಯಾದಲ್ಲಿ ಕೇಳಿದ್ದಾರೆ, ರಾಯಚೂರಿನವರು ಕೇಳಿದ್ದಾರೆ, ಕೊಟ್ಟಿದ್ದೇವೆ. ಎಲ್ಲೆಲ್ಲ ಬೇಕಾಗುತ್ತದೆ ಅಲ್ಲಿ ಕೊಡಲು ಪ್ರಯತ್ನ ಮಾಡುತ್ತೇವೆ. ಮುಂದಿನ ಸಾಲಿನಲ್ಲಿ ಕಷ್ಟ ಬರುವುದಿಲ್ಲ.

Sri K. LAKKAPPA.—Though there is huge demand in Tumkur District for the supply of seeds, they have not been supplied to the ryots, will the Government take steps to supply the same ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಕೆಲವು ಪ್ರದೇಶಗಳಿಗೆ ಮಾತ್ರ ಬೀಜ ಬೇಕೆಂದು ಕೇಳಿದ್ದಾರೆ. ತುಮಕೂರಿನಿಂದ ಇನ್ನೂ ರೆಪ್ರೆಸೆಂಟೇಶನ್ ಬಂದಿಲ್ಲ. ಅಂದು ಬಂದಲ್ಲಿ ಮಾನ್ಯ ಸದಸ್ಯರಿಗೆ ಬೇಕೆಂದು ತಿಳಿಸಿದರೆ ಮುಂದೆ ಸಪ್ಲೈ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಡೀ ರಾಜ್ಯದ ಅವಶ್ಯಕತೆಯನ್ನು ನೋಡಿ ಎಲ್ಲಾ ಪೂರೈಸುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ, ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಮುಂದಿನ ವರ್ಷ ಪೂರೈಸಲು ಪ್ರಯತ್ನ ಮಾಡುತ್ತೇವೆ. ಆದರೆ ಎರಡು ವರ್ಷದೊಳಗೆ ಸಂಪೂರ್ಣವಾಗಿ ಹಂಚಿ ಬಿಡಬಹುದು.

ಶ್ರೀ ಎಸ್. ಎ. ಅಗ್ನಿಹೋತ್ರಿ.—ಈಗ ನ್ಯಾಶನಲ್ ಸೀಡ್ಸ್ ಕಾರ್ಪೊರೇಶನ್‌ವರು ಕಾಗದ ಬರೆದರೆ ಹೆಣ್ಣು ಬೀಜ ಇಲ್ಲ ಎಂದು ಹೇಳುತ್ತಾರೆ. ಅದಕ್ಕೆ ಈ ಹೆಣ್ಣು ಬೀಜವನ್ನು ಎಲ್ಲಿಂದ ತರಿಸುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧ್ಯವಾದ ಮಟ್ಟಿಗೆ ಎರಡೂ ಕಳಿಸುತ್ತಾರೆ. ಮತ್ತು ಎರಡೂ ಇಲ್ಲ ಎಂದು ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಈಗ ಹೈಬ್ರಿಡ್ ಜೋಳ ಬಹಳ ಮುಖ್ಯವಾದುದು. ಅದಕ್ಕೆ ರೈತರಿಗೆ 50 ಪರ್‌ಸೆಂಟ್ ದರದಲ್ಲಿ ಕೊಟ್ಟು ಅವನಿಗೆ ಬೇಕಾಗುವ ಗೊಬ್ಬರ ಮುಂತಾದುವುಗಳನ್ನು ಒದಗಿಸಿದರೆ ಅದರಿಂದ ಅನುಕೂಲವಾಗುವುದಿಲ್ಲವೇ ಮತ್ತು ಫಲಕಾರಿಯಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರ ಉಪನ್ಯಾಸವನ್ನು ಉತ್ಸುಕತೆಯಿಂದ ಕೇಳಿದ್ದೇನೆ.

9-30 A.M.

ಶ್ರೀ ಸಿದ್ದಯ್ಯ ಕಾಶಿಮಠ.—ಮಿಶ್ರ ತಳಿಯ ಜೋಳವನ್ನು ಹೆಚ್ಚಾಗಿ ಬೆಳೆಯುವುದಕ್ಕೆ ರೈತರಿಗೆ ಸಹಾಯ ಕೊಡುವುದಕ್ಕಾಗಿ ನಮ್ಮ ರೈತರಲ್ಲಿ ಯಾರನ್ನಾದರೂ ಬೇರೆ ಕಡೆಗೆ ತರಬೇತಿಗಾಗಿ ಕಳುಹಿಸುತ್ತೀರಾ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ತರಬೇತಿಯಾದವರು ಇದ್ದಾರೆ. ಯಾರನ್ನೂ ಅದಕ್ಕಾಗಿ ಕಳುಹಿಸ ಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಸಂಜೀವನಾಥ ಐಕಳ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೈಬ್ರಿಡ್ ಜೋಳವನ್ನು ಬೆಳೆದರೆ ಅಲ್ಲಿ ರಾಥದಾಯಕವಾಗಿ ಮತ್ತು ನರಿಯಾಗಿ ಬರುತ್ತದೆ ಎನ್ನುವ ಅಭಿಪ್ರಾಯಪಟ್ಟಿರುವುದರಿಂದ ಅಲ್ಲಿಗೆ ಈಗ ಇರುವ ಪಟ್ಟಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನೂ ಸೇರಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಯೋಚನೆ ಮಾಡುವುದಕ್ಕೆ ಯೋಗ್ಯವಾದ ವಿಷಯ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಹೈಬ್ರಿಡ್ ಬೀಜವನ್ನು ಒದಗಿಸುವುದಕ್ಕೆ ಕೆಲವು ರಿಯಾಯಿತಿ ಗಳನ್ನು ಕೊಡುತ್ತಿದ್ದೇವೆಂದು ಹೇಳಿದರು. ಜಮಖಂಡಿಯಿಂದ ಕೊಟ್ಟ ಜೋಳ ಐದಾರು ರೂಪಾಯಿ ಗಳಿಗೆ ಸಿಕ್ಕಿತು. ಆದರೆ ಅದು ಸಾಲದೆ ಬಂದು ಬೇರೆ ಜನರು 16 ರೂಪಾಯಿ ಪ್ರಕಾರ ತಂದು ಬಿತ್ತಿದ್ದಾರೆ. ಮುಂದೆ ಮಾರ್ಚ್ ತಿಂಗಳಿನಲ್ಲಿ ಸರ್ಕಾರದವರು ಅಥವಾ ಬ್ಯಾಂಕುಗಳಿಂದ ಈ ಬಿತ್ತನೆ ಬೀಜವನ್ನು ಉತ್ಪತ್ತಿ ಮಾಡುವುದಕ್ಕೆ ಸಹಾಯ ಮಾಡುವಾಗ ಅದನ್ನು ಉತ್ಪತ್ತಿ ಮಾಡುವವರು ಹೇಗಾದರೂ ಮಾರುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಇನ್ನು ಮುಂದೆ ಬರುವುದಿಲ್ಲ.

Mr. SPEAKER.— Question Hour is over.

QUESTIONS FOR ANSWERS ON THE DAY

(but not taken up)

Purchasing of Irrigation Pumpsets.

*Q.—171. Smt. G. C. BHAGEERATHAMMA (Tumkur).—

Will the Government be pleased to state :—

(*a*) the amount sanctioned to Agriculture Department during 1965-66 for purchasing of irrigation pumpsets to Tumkur District ;

(*b*) The number of pumpsets distributed to the ryots so far ?